ಬಾದಾಮಿಯಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ಮನೆಗಳ ನಿರ್ಮಾಣ.

2747: (3798)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ಹಾಗೂ ಕೆರೂರ ಪಟ್ಟಣಗಳು ಹೌಸಿಂಗ್ ಬೋರ್ಡ್‌ನ ಸವಲತ್ತುಗಳಿಂದ ವಂಚಿತವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ತೀವ್ರಗತಿಯಿಂದ ಮನೆ ಕಟ್ಟಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದೆ?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ) ಬಾದಾಮಿ ಪಟ್ಟಣದಲ್ಲಿ 1988ನೇ ಸಾಲಿನಲ್ಲಿಯೇ, 20 ಎಲ್.ಐ.ಜಿ.ಮನೆಗಳನ್ನು ಕಟ್ಟಲಾಗಿತ್ತು. ಆದರೆ, ಇಲ್ಲಿನ ಮನೆಗಳಿಗೆ ಸಾರ್ವಜನಿಕರಿಂದ ಬೇಡಿಕೆ ಬರದೇ ಇದ್ದುದರಿಂದ ಬೇಡಿಕೆ ಬಂದಿದ್ದ 10 ಜನ ಸಾರ್ವಜನಿಕರಿಗೆ ಮನೆ ಹಂಚಿ, ಉಳಿದ 10 ಮನೆಗಳನ್ನು ನೀರಾವರಿ ಇಲಾಖೆಗೆ ಮಾರಲಾಯಿತು. ಕೆರೂರ ಪಟ್ಟಣದಲ್ಲಿ ಮನೆಗಳಿಗೆ ಮತ್ತು ನಿವೇಶನಗಳಿಗೆ ಹೆಚ್ಚಿನ ಬೇಡಿಕೆ ಇಲ್ಲದಿದ್ದುದರಿಂದ ಮಂಡಳಿಯಿಂದ ಇದುವರೆವಿಗೂ ಯಾವ ಯೋಜನೆಯನ್ನು ತೆಗೆದುಕೊಳ್ಳಲಾಗಲಿಲ್ಲ.

ಆ) ಕರ್ನಾಟಕ ಗೃಹ ಮಂಡಳಿಯ ನಿಯಮಗಳ ಪ್ರಕಾರ ಯಾವುದೇ ಯೋಜನೆ ಪ್ರಾರಂಭಿಸುವ ಮೊದಲು ಬೇಡಿಕೆ ಸಮೀಕ್ಷೆ ನಡೆಸಲಾಗುವುದು. ಸಾರ್ವಜನಿಕರಿಂದ ನಿರೀಕ್ಷಿತ ಬೇಡಿಕೆ ಬಂದಲ್ಲಿ ಮಾತ್ರ ಯೋಜನೆ ಕೈಗೆತ್ತಿಕೊಳ್ಳಲಾಗುವುದು. ಬದಾಮಿ ಪಟ್ಟಣದಲ್ಲಿ ಇನ್ನೊಂದು ಗೃಹ ನಿರ್ಮಾಣ ಯೋಜನೆಯನ್ನು ತೆಗೆದುಕೊಳ್ಳಲು ಉದ್ದೇಶಿಸಿ, ಸದರಿ ಯೋಜನೆಗೆ ಸೂಕ್ತವಾದ ಜಮೀನನ್ನು ಹುಡುಕಲಾಗುತ್ತಿದೆ. ಗೃಹ ನಿರ್ಮಾಣ ಯೋಜನೆಗೆ ಸೂಕ್ತವಾದ ಜಮೀನು ದೊರಕಿದಲ್ಲಿ ಬೇಡಿಕೆ ಸಮೀಕ್ಷೆ ನಡೆಸಿ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ಬಂದರೆ ಜಮೀನನ್ನು ವಶಪಡಿಸಿಕೊಂಡು ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು. ಈಗ ಕೆರೂರು ಪಟ್ಟಣವು ನೀರಾವರಿ ಸೌಲಭ್ಯವನ್ನು ಹೊಂದಿರುವುದರಿಂದ ಈಗ ನಗರದ ಬೆಳವಣಿಗೆ ಉತ್ತಮವಾಗಿದ್ದು, ಇಲ್ಲಿ ಮಂಡಳಿಯಿಂದ ಬೇಡಿಕೆ ಸಮೀಕ್ಷೆ ನಡೆಸಿ, ಬೇಡಿಕೆಗೆ ತಕ್ಕಂತ ಸೂಕ್ತ ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು.

ಬಾದಾಮಿ ತಾಲ್ಲೂಕು ತೋಟದ ಬೆಳೆಗಾರರ ಸಹಕಾರ ಸಂಘ ಸ್ಥಾಪನೆ.